## ಮೂರು ದಿನದ ಕೆರೆ ಸಮ್ಮೇಳನಕ್ಕೆ ಚಾಲನೆ: ಸ್ವರ್ಣವಲ್ಲೀಶ್ರೀ ಅಭಿಮತ

# ಹಳೇ ಕೆರೆ ಜೀರ್ಣೋದ್ಧಾರವೇ ಲೇಸು



ಕೆರೆಗೆ ಬಾಗಿನ ಅರ್ಪಣೆ



ಕೇಂದ್ರದ ರಾಸಾಯನಿಕ ಮತ್ತು ಗೊಬ್ಬರ ಸಚಿವ ಅನಂತಕುಮಾರರಿಂದ ಸಮ್ಮೇಳನಕ್ಕೆ ಚಾಲನೆ

ಶಿರಸಿ, ನ.13: ಹೊಸ ದೇವಸ್ಥಾನ ನಿರ್ಮಿಸುವುದಕ್ಕಿಂತ ಹಳೆ ದೇವಸ್ಥಾನ ಪುನರ್ ನಿರ್ಮಿಸುವುದು ಶ್ರೇಷ್ಠವಾದದ್ದು ಎಂಬ ಮಾತಿದೆ. ಅದೇ ರೀತಿಯಲ್ಲಿ ಹೊಸ ಕೆರೆ ನಿರ್ಮಿಸುವುದಕ್ಕಿಂತ ಹಳೇ ಕೆರೆ ಜೀರ್ಣೋದ್ಧಾರ ಉತ್ತಮವಾಗಿದೆ ಎಂದ ಶ್ರೀಗಳು, ನದಿ ತಿರುವು ಯೋಜನೆಗಿಂತ ಹಳೆ ಕೆರೆ ಅಭಿವೃದ್ಧಿ ಉತ್ತಮ ಕೆಲಸವಾಗಿದೆ ಎಂದು ಶ್ರೀ ಸೋಂದಾ ಸ್ವರ್ಣವಲ್ಲೀ ಪೀಠಾಧೀಶರಾದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಹೇಳಿದ್ದಾರೆ.

ಅವರಿಂದು ಸ್ವರ್ಣವಲ್ಲೀ ಮಠದ ಸುಧರ್ಮಾ ಸಭಾಭವನದಲ್ಲಿ ಬೆಂಗಳೂರಿನ ಶಕ್ತಿ ಮತ್ತು ಜೌಗು ಭೂಮಿ ಸಂಶೋಧನಾ ತಂಡ ಪರಿಸರ ವಿಜ್ಞಾನ ಕೇಂದ್ರ ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಸ್ಥಳೀಯ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಕೆರೆ ಸಮ್ಮೇಳನದ ಸಾನ್ನಿಧ್ಯ ವಹಿಸಿ, ಉತ್ತಮವಾಗಿ ಕೆರೆ ಸಂರಕ್ಷಣೆ ಮಾಡಿದ ಸಾಗರ ತಾಲೂಕು ಜಗಳೇಮನೆ ಗ್ರಾಮ ಅರಣ್ಯ ಸಮಿತಿಗೆ ಪ್ರಶಸ್ತಿ, ಫಲ ಮಂತ್ರಾಕ್ಷತೆ ನೀಡಿ ಸನ್ಮಾನಿಸಿ ಆಶೀರ್ವಚನ ನೀಡುತ್ತಿದ್ದರು.

### ಹಸಿರು ಜೀವನಶೈಲಿ ಅಳವಡಿಕೆ ಅಗತ್ಯ

ದೀಪ ಬೆಳಗಿ ಸಮ್ಮೇಳನ ಉದ್ಘಾಟಿಸಿ, ಅಧ್ಯಯನ ವರದಿ ಬಿಡುಗಡೆ ಮಾಡಿ ಮಾತನಾಡಿದ ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಸಚಿವರಾದ ಅನಂತಕುಮಾರ ಅವರು ಇಂದು ನಮ್ಮ ಜೀವನಶೈಲಿ ಬದಲಾಗಬೇಕಿದೆ. ಹಸಿರು ಜೀವನಶೈಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದ ಅವರು, ಮಧುಮೇಹ, ರಕ್ತದೊತ್ತಡ ಸೇರಿದಂತೆ ವಿವಿಧ ರೀತಿಯ ರೋಗಗಳಿಗೂ ಜೀವನ ಶೈಲಿಯೇ ಕಾರಣವಾಗಿದೆ. ಇಂದಿನ ನಮ್ಮ ಜೀವನ ಶೈಲಿ ಪಾಶ್ಚಿಮಾತ್ಯ ಸಂಸ್ಕೃತಿಯಾಗಿದೆ ಎಂದು ಹೇಳಿ ಕೆರೆಗಳ ಅಭಿವೃದ್ಧಿಯಿಂದ ಹಸಿರುನಿರ್ಮಾಣ ಸಾಧ್ಯ. ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತದೊಂದಿಗೆ ಹಸಿರು ಭಾರತ ನಿರ್ಮಾಣ ಪ್ರತಿಜ್ಞೆ ಮಾಡೋಣ ಎಂದು ಹೇಳಿದರು.

ದಾಖಲೆಯೊಂದಿಗೆ ಬನ್ನಿ : ಕಂಡಲ್ಲಿ ಕೆಲಸ ಹೇಳಬೇಡಿ ಎಂದ ಅನಂತಕುಮಾರ, ಕೆರೆ ಸಮ್ಮೇಳನದ ನಿರ್ಣಯ ದಾಖಲೆಗಳೊಂದಿಗೆ ಚಳಿಗಾಲದ ಅಧಿವೇಶನ ನಡೆಯುವಾಗ ದೆಹಲಿಗೆ ಬಂದರೆ ನೀರಾವರಿ ಮತ್ತು ಅರಣ್ಯ, ಪರಿಸರ ಹಾಗೂ ಪ್ರಧಾನಿ ಕಚೇರಿಯೊಂದಿಗೆ ಮಾತನಾಡಿ ನಿರ್ಣಯ ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು.

ದೇವಸ್ಥಾನ ನಿರ್ಮಾಣ ಮಾಡಿದಷ್ಟೇ ಪುಣ್ಯ ಕೆರೆ ನಿರ್ಮಾಣದಿಂದಲೂ ಲಭಿಸುತ್ತದೆ ಎಂಬುದನ್ನು ನಮ್ಮ ಋಷಿಮುನಿಗಳೇ ಹೇಳಿದ್ದಾರೆ. ದೇವಸ್ಥಾನಗಳಿದ್ದರೆ ಅಲ್ಲೊಂದು ಕೆರೆ ಇದ್ದೇ ಇರುತ್ತದೆ. ಇದು ಕೆರೆಗೂ–ದೇವಸ್ಥಾನಕ್ಕೆ ಇರುವ ಸಂಬಂಧ ತೋರಿಸುತ್ತದೆ. ಕೆರೆಗಳ ವಿಷಯದಲ್ಲಿ ಬೇರೆ ಬೇರೆ ಜನರು ನೀಡುವ ದೃಷ್ಟಿಕೋನಗಳೇ ಬೇರೆ ಬೇರೆಯಾಗಿದೆ. ರೈತರು ಕೆರೆಯಿಂದ ಎಷ್ಟು ಜಮೀನಿಗೆ ಹೇಗೆ ನೀರಾವರಿ ಮಾಡುವುದು ಎಂದು ಚಿಂತನೆ ಮಾಡುತ್ತಿದ್ದರೆ ನಗರ ಪ್ರದೇಶದಲ್ಲಿ ಕೆರೆಯಿದ್ದರೆ ಅಲ್ಲಿಯ ಆಡಳಿತ ತ್ಯಾಜ್ಯ ಹಾಕಲು ಸ್ಥಳವಾಯಿತು ಎಂದು ಯೋಚನೆ ಮಾಡುತ್ತದೆ. ಭೂಗಳ್ಳರು ಜಾಗ ಮಾರಿದರೆ ಹಣ ಎಷ್ಟು ಬರುತ್ತದು ಎಂದು ವಿಚಾರ ಮಾಡುತ್ತಾರೆ ಎಂದರು.

ಪುಟ 3

1ನೇ ಪುಟದಿಂದ

### ......ಜೀರ್ಣೋದ್ಧಾರವೇ ಲೇಸು

ಕೆರೆಯಿಂದ ಆಗುವ ಲಾಭದ ಕುರಿತು ಚಿಂತನೆ ಇಂದಿನ ಅಗತ್ಯವಾಗಿದೆ. ಪ್ರತಿಯೊಂದು ಕೆರೆಯೂ ಜಲಮೂಲವಾಗಿದ್ದರೆ ಕೆಲವೊಂದು ಕೆರೆಗಳು ನದಿಮೂಲಗಳೂ ಆಗಿವೆ. ಇದರಿಂದ ಕೆರೆ ಸ್ವಚ್ಛವಾಗಿದ್ದರೆ ನದಿಗಳು ಸ್ವಚ್ಛವಾಗಿರುತ್ತವೆ ಎಂದು ಹೇಳಿದರು.



ಅರಣ್ಯ ಸಮಿತಿಗೆ ಪುರಸ್ಕಾರ

ಹಳ್ಳಿಗಳ ಯುವಜನತೆ ನಗರಗಳಿಗೆ ವಲಸೆ ಹೋಗುತ್ತಿರುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ತೀವ್ರ ಆತಂಕ ವ್ಯಕ್ತಪಡಿಸಿ, ಜನರೇ ಇಲ್ಲದಿದ್ದರೆ ಏನು ಮಾಡಿ ಏನು ಲಾಭ ? ಯುವ ಜನತೆ ಹಳ್ಳಿಯಲ್ಲಿ ವಾಸಮಾಡಬೇಕು. ಮತ್ತು ನಗರ ವಲಸೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಜನತೆಗೆ ತಿಳುವಳಿಕೆ ನೀಡಬೇಕು ಎಂದು ಸ್ವರ್ಣವಲ್ಲೀ ಶ್ರೀ ಕರೆ ನೀಡಿದರು.

ಆರ್ಥಿಕ ತಜ್ಞ ಬಿ.ಎಂ.ಕುಮಾರಸ್ವಾಮಿ ಮಾತನಾಡಿ, ಸರ್ಕಾರ 'ನದಿ ತಿರುವು' ಎಂಬ ಬೃಹತ್ ರಾಕ್ಷಸನನ್ನು ಬಿಡುತ್ತದೆ. ಇದರಿಂದ ಆಗುವ ಪರಿಣಾಮದೇನು ಎಂಬುದನ್ನು ಸರ್ಕಾರ ಹೇಳುವುದಿಲ್ಲ. ಬದಲಿಗೆ ಲಾಭ ಹಿಗ್ಗಿಸಿ ಹೇಳುತ್ತದೆ. ಕೆಲಸ ಮುಗಿಯುವಷ್ಟರಲ್ಲಿ ವೆಚ್ಚ ಹೆಚ್ಚಾಗಿರುತ್ತದೆ. ನಂತರ ಏನೂ ಮಾಡಲು ಸಾಧ್ಯವಾಗುವುದಿಲ್ಲ. ಜನತೆ ವೆಚ್ಚ ಹೊರಲೇಬೇಕು. ಇದೀಗ ಬೃಹತ್ ಯೋಜನೆಗಳಿಂದ ನಿರಾಶ್ರಿತರಾದ ಶೇ.50 ರಷ್ಟು ಜನತೆಗೆ ಪುನರ್ವಸತಿ ಕಲ್ಪಿಸಿಲ್ಲ. ಅವರೆಲ್ಲ ವನವಾಸಿಗಳು. ಅವರಿಗೆ ಧ್ವನಿಯೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ, ಕೆರೆ ನಿರ್ಮಾಣದಿಂದ ನಿರಾಶ್ರಿತರ ಸಮಸ್ಯೆ ಉದ್ಭವವಾಗುವುದೇ ಇಲ್ಲ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ವಾಗ್ದೇವಿ ಸಂಸ್ಥೆಯ ಹರೀಶ ಮಾತನಾಡಿದರು. ಶಿರಸಿ–ಸಿದ್ದಾಪುರ ವಿಧಾನಸಭಾ ಸದಸ್ಯ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ.ರಾಮಚಂದ್ರ ದಿಕ್ಸೂಚಿ ಭಾಷಣ ಮಾಡಿದರು.

ಅರ್ಚನಾ ಮತ್ತು ಸಂಗಡಿಗರು ಜಲ ಜಾಗೃತಿ ಗೀತೆ ಹಾಡಿದರೆ ಜಿ.ಎಂ.ಭಟ್ ವಾಜಗಾರ ಯಕ್ಷಗಾನ ಸ್ವಾಗತ ಪದ್ಯ ಹಾಡಿದರು. ಶ್ರೀಮಠದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ವೇದಘೋಷ ಮಾಡಿದರು. ವಿಶ್ವನಾಥ ಶೀಗೇಹಳ್ಳಿ ಶ್ರೀಗಳಿಗೆ ಫಲ ಸಮರ್ಪಣೆ ಮಾಡಿದರು. ವೇದಿಕೆಯಲ್ಲಿ ಸಿಪಿಕೆನ ಎಸ್.ಕೆ.ನಾಯ್ಕ ಮೊದಲಾದವರು ಉಪಸ್ಥಿತರಿದ್ದರು.

ಅನಂತ ಅಶೀಸರ ಪ್ರಾಸ್ತಾವಿಕ ಮಾತನಾಡಿದರೆ, ಶ್ರೀಮಠದ ಉಪಾಧ್ಯಕ್ಷ ವಿ.ಎನ್.ಹೆಗಡೆ ಸ್ವಾಗತಿಸಿದರು. ಎಂ.ಸಿ.ಹೆಗಡೆ ವಂದಿಸಿದರೆ ಅನಂತ ಭಟ್ ಹುಳಗೋಳ ಕಾರ್ಯಕ್ರಮ ನಿರ್ವಹಿಸಿದರು.